ಈ) ಬಿಜಿಎಂಎಲ್ ನೌಕರರ ಪ್ರಕರಣವು ಪ್ರಸ್ತುತ ಇರುವ ಸರ್ಕಾರದ ನೀತಿ ಮತ್ತು ಮಾರ್ಗಸೂಚಿಗಳ ವ್ಯಾಪ್ತಿಯಡಿಯಲ್ಲಿ ಬರುವುದಿಲ್ಲವಾದ್ದರಿಂದ ತಡವಾಗಿರುತ್ತದೆ.

ಶಿರಹಟ್ಟಿ ತಾಲ್ಲೂಕಿನಲ್ಲಿ ಬೆಳೆ ವಿಮೆಯೋಜನೆ

132 (1288) ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ್ ಜಿಲ್ಲೆ ಶಿರಹಟ್ಟಿ ತಾಲ್ಲೂಕು ರೈತರಿಗೆ ಬೆಳೆ ವಿಮೆ ಯೋಜನೆ ಅನ್ವಯವಾಗದಿರಲು ಕಾರಣಗಳೇನು ?

ಆ) ಬೆಳೆ ವಿಮೆ ಯೋಜನೆಯಿಂದ ಶಿರಹಟ್ಟಿ ತಾಲ್ಲೂಕಿನ ರೈತರು ವಂಚಿತರಾಗಿದ್ದಕ್ಕೆ ಹೊಣೆಗಾರರು ಯಾರು ?

ಇ) ಹೊಣೆಗಾರರಾದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ?

ಈ) ಈ ಯೋಜನೆಯಿಂದ ವಂಚಿತರಾದ ರೈತರಿಗೆ ಅನುಕೂಲವಾಗುವಂತೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ಗದಗ್ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ರೈತರನ್ನು ಬೆಳೆ ವಿಮಾ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಆ) ಶಿರಹಟ್ಟಿ ತಾಲ್ಲೂಕಿನ ರೈತರನ್ನು ಬೆಳೆ ವಿಮೆ ವ್ಯಾಪ್ತಿಗೆ ಒಳಪಡಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳ ಭರ್ತಿ

133 (1286) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಕೇಂದ್ರಗಳಲ್ಲಿ ಸಹಾಯಕಿಯಾಗಿ ಕೆಲಸ ನಿರ್ವಹಿಸುತ್ತಿರುವವರಿಗೆ ಆಯಾ ಕೇಂದ್ರಗಳಲ್ಲಿ ಕಾರ್ಯಕರ್ತೆಯರ ಹುದ್ದೆ ತೆರವಾದಾಗ ವಿದ್ಯಾರ್ಹತೆ ಯುಳ್ಳ ಸಹಾಯಕಿಯರು ಅರ್ಜಿ ಸಲ್ಲಿಸಿದಾಗ ಅವರಿಗೆ ಆದ್ಯತೆ ನೀಡಲಾಗುವುದೇ ?

ಆ) ನೀಡುವುದಾದಲ್ಲಿ, ತತ್ಸಂಬಂಧವಾದ ಆದೇಶವನ್ನು ಯಾವಾಗ ಹೊರಡಿಸಲಾಗುವುದು ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಸಹಾಯಕಿಯರಿಗೆ ಆದ್ಯತೆಯನ್ನು ನೀಡಲಾಗುವುದು

ಆ) ಈಗಾಗಲೇ ಇದಕ್ಕೆ ಸಂಬಂಧಪಟ್ಟ ಸುತ್ತೋಲೆ ಸಂ : ಡಿಡಬ್ಲೂ ಸಿ : ಐಸಿಡಿ : ಎಎನ್‌ಜಿಇ : 01-02 ದಿನಾಂಕ : 18.2.02 ರಂದು ಹೊರಡಿಸಲಾಗಿದೆ.

ಸಿಂಧನೂರು ತಾಲ್ಲೂಕಿನ ಸಿರನಗುಡಿ ಪಿಕಪ್ ಡ್ಯಾಂ ಕಾಮಗಾರಿ ಕುರಿತು

134 (839) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿಂದನೂರು ತಾಲ್ಲೂಕಿನ ಸಿರನಗುಡಿ ಪಿಕಪ್ ಡ್ಯಾಂ ಕಾಮಗಾರಿ ಯಾವ ಹಂತದಲ್ಲಿದೆ : ಈ ಯೋಜನೆಗೆ ಮಂಜೂರಾದ ಹಣ ಎಷ್ಟು :

ಆ) ಅರಳಹಳ್ಳಿ ಪಿಕಪ್ ಡ್ಯಾಂ ಮಂಜೂರಾದ ಹಣ ಎಷ್ಟು ; ಸದರಿ ಕಾಮಗಾರಿ ಯಾವ ಹಂತದಲ್ಲಿದೆ :

ಇ) ಗೋರೆಬಾಳ ಪಿಕಪ್ ಡ್ಯಾಂಗೆ ಮಂಜೂರಾದ ಹಣವೆಷ್ಟು ; ಸದರಿ ಕಾಮಗಾರಿ ಯಾವ ಹಂತದಲ್ಲಿದೆ ; ಯಾವ ವರ್ಷದಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ ?

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :

ಅ) ಸಿರನಗುಡಿ ಪಿಕ್ ಡ್ಯಾಂ ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪಟ್ಟಿಯು ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ. ಇದಕ್ಕೆ ಸಂಬಂಧಿಸಿದ ಫೀಡರ್ ಕಾಲುವೆಯು 7.24 ಕಿ.ಮಿ. ಉದ್ದವಿದ್ದು ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಪಿಕಪ್ ಡ್ಯಾಂನ ಅಡ್ಡಗೋಡೆಯ ಕೆಲಸವು ಬಾಕಿ ಉಳಿದಿದ್ದು, ಫೀಡರ್ ಕಾಲುವೆಗೆ ಹಳ್ಳದಲ್ಲಿ ಫ್ಲಡ್ ಬ್ಯಾಂಕನ್ನು ನಿರ್ಮಿಸಿ ಫೀಡರ್ ಕಾಲುವೆಯ ಮುಖಾಂತರ ನೀರನ್ನು ನೀರಾವರಿಗಾಗಿ ಬಳಿಸಿಕೊಳ್ಳಲಾಗಿರುತ್ತದೆ. ಈ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 84.00 ಲಕ್ಷಗಳು ಆಗಿರುತ್ತದೆ.

ಆ) ಅರಳಹಳ್ಳಿ ಪಿಕಪ್ ಡ್ಯಾಂಗೆ ರೂ. 10.56 (ಮೂಲ ಅಂದಾಜು) ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ. ಈಗ ಪರಿಷ್ಕೃತ ಅಂದಾಜು ರೂ. 100.00 ಲಕ್ಷಗಳಾಗಿರುತ್ತದೆ. ಪಿಕಪ್ ಡ್ಯಾಂನ ಫೀಡರ್ ಕಾಲುವೆಯು 5.50 ಕಿ.ಮಿ. ಉದ್ದವಿದ್ದು ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಹಾಗೂ ಕಾಮಗಾರಿಗೆ ರೂ. 38.00 ಲಕ್ಷಗಳು ಖರ್ಚಾಗಿರುತ್ತದೆ. ಪಿಕಪ್ ಡ್ಯಾಂನ ಅಡ್ಡಗೋಡೆಯು ಅಪೂರ್ಣಗೊಂಡಿದ್ದು ಹಳ್ಳದಲ್ಲಿ ರಿಂಗ್ ಬಂಡನ್ನು ನಿರ್ಮಿಸಿ ಸಧ್ಯಕ್ಕೆ ನೀರನ್ನು ನೀರಾವರಿಗಾಗಿ ಬಳಸಿಕೊಳ್ಳಲಾಗುತ್ತಿದೆ.

ಇ) ಈ ಯೋಜನೆಗೆ ರೂ. 12.886 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ. ಈ ಪಿಕಪ್ ಡ್ಯಾಂನ ನಿರ್ಮಾಣ ಕಾಮಗಾರಿಯನ್ನು 1979ರಲ್ಲಿ ಪ್ರಾರಂಭವಾಯಿತು. 1983ರಲ್ಲಿ ಕಾಮಗಾರಿಗೆ ಸಂಬಂಧಿಸಿದ ಅಡ್ಡಗೋಡೆ ಕೆಲಸವನ್ನು ಮುಗಿಸಿದ್ದು ಕಬ್ಬಿಣದ ಶೆಟರನ್ನು ಅಳವಡಿಸುವ ಕೆಲಸ ಬಾಕಿ ಉಳಿದಿದೆ. ಇದುವರೆಗೆ 9.75 ಲಕ್ಷ ರೂ. ಖರ್ಚಾಗಿರುತ್ತದೆ. ಈ ಯೋಜನೆಯನ್ನು ಮುಂದಿನ ಕ್ಲೋಷರ್ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಕಬಿನಿ ಏತ ನೀರಾವರಿ ಸರ್ವೆಕಾರ್ಯ

135 (874) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಹೆಚ್.ಕೆ. ಪಾಟೀಲ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಬಿನಿ ಏತ ನೀರಾವರಿ ಸರ್ವೇ ಕಾರ್ಯಕ್ಕಾಗಿ ಬಿಡುಗಡೆಯಾಗಿರುವ ಈವರೆಗಿನ ರೂ. 75.00 ಲಕ್ಷಗಳು ಪೂರ್ಣ ಖರ್ಚಾದಿದೆಯೇ ; ಈ ಹಣದಿಂದ ಎಷ್ಟು ಕಿ.ಮೀ. ವರೆಗಿನ ಸರ್ವೆ ಕಾರ್ಯ ಪೂರ್ಣಗೊಂಡಿದೆ ; ಉಳಿಕೆ ಸರ್ವೆ ಕಾರ್ಯ ಪೂರ್ಣಗೊಳ್ಳಲು ಬೇಕಾಗುವ ಅಂದಾಜು ಮೊಬಲಗು ಎಷ್ಟೆಷ್ಟು ಹಾಗೂ ಯಾವಾಗ ಈ ಸರ್ವೇ ಕಾರ್ಯ ಪೂರ್ಣಗೊಳ್ಳುವುದು ;

ಆ) ಹೊಂಗನೂರು, ಹಿರೇಕೆರೆ ಯೋಜನೆಯು ಯಾವ ಹಂತದಲ್ಲಿದೆ ; ಈ ಯೋಜನೆಗೆ ಬಿಡುಗಡೆಯಾಗಬೇಕಾಗಿರುವ ಹಣ ಎಷ್ಟೆಷ್ಟು ; ಈಗಾಗಲೇ ಬಿಡುಗಡೆ ಮಾಡಲಾಗಿರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಖರ್ಚು ಮಾಡಲಾಗಿದೆಯೆ ; ಈ ಯೋಜನೆಯು ಯಾವಾಗ ಪೂರ್ಣಗೊಳಿಸಲಾಗುವುದು ?